# ಹೊನ್ನಾಳಿ ಹಿರೇಕಲ್ಮಠ: ಐತಿಹಾಸಿಕ ನೆಲೆ

**ಮಂಜುನಾಥಯ್ಯ ನಾಗರಾಜಯ್ಯ (ಮಂಜುನಾಥಯ್ಯ ದೇವರು ಕರೇವಾಡಿಮಠ)**
**ಸಂಶೋಧನಾ ವಿದ್ಯಾರ್ಥಿ**
**ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ,**
**ಶಂಕರಘಟ್ಟ.**

**ಕಿರು ಮಾಹಿತಿ**

ಅತ್ಯಂತ ಪ್ರಾಚೀನವಾದ ಮಠಗಳಲ್ಲಿ ಒಂದೆನಿಸಿಕೊಂಡಿರುವ 'ಹೊನ್ನಾಳಿ ಹಿರೇಕಲ್ಮಠದ ಐತಿಹಾಸಿಕ ನೆಲೆ'ಯನ್ನು ಸಂಶೋಧನಾತ್ಮಕವಾದ ಅಧ್ಯಯನದ ಹಿನ್ನೆಲೆಯಲ್ಲಿ ಕಟ್ಟಿಕೊಡುವುದು ಇಲ್ಲಿನ ವಿಷಯ ವಿಶ್ಲೇಷಣೆಯ ಮುಖ್ಯ ಉದ್ದೇಶವಾಗಿದೆ. ಈ ಕುರಿತಂತೆ ಈಗಾಗಲೇ ಹಲವು ಕೃತಿಗಳು ಬಿಡಿ ಲೇಖನಗಳು ಪ್ರಕಟಗೊಂಡಿವೆಯಾದರು ಅವುಗಳು ಹಿರೇಕಲ್ಮಠದ ಮೂಲ ಐತಿಹಾಸಿಕ ನೆಲೆಯನ್ನು ಗುರುತಿಸುವಲ್ಲಿ ಸಂಶೋಧನಾತ್ಮಕವಾಗಿ ಪೂರ್ಣಪ್ರಮಾಣದಲ್ಲಿ ಕಟ್ಟಿಕೊಟ್ಟಿರುವಂತೆ ಕಾಣುವುದಿಲ್ಲ. ಅದಾಗ್ಯೂ 'ಹೊನ್ನಾಳಿ ಹಿರೇಕಲ್ಮಠದ ಗುರುಪರಂಪರೆ', ಡಾ. ನಾ. ಕೊಟ್ರೇಶ್ ಉತ್ತಂಗಿಯವರ 'ಹೊನ್ನೆಲೆಗಳು' ಕೃತಿಗಳಲ್ಲಿ, ಇತಿಹಾಸ ಪ್ರಾಧ್ಯಾಪಕರಾದ ಪ್ರೊ. ಎಂ. ಶಿವಶಂಕರಯ್ಯ ಅವರು 'ಪಂಚಾಮೃತ' (2006ರ ಸ್ಮರಣ ಸಂಪುಟ) ಕೃತಿಯಲ್ಲಿ ಪ್ರಕಟಗೊಂಡಿರುವ "ಹೊನ್ನಾಳಿ ಶ್ರೀ ಚನ್ನಪ್ಪಸ್ವಾಮಿ ಮಠದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಅಧ್ಯಯನ" ಎಂಬ ಲೇಖನದಲ್ಲಿ ಹಾಗೂ 'ಜಾನಪದದ ವಿವಿಧ ಪ್ರಕಾರದ ಹಾಡುಗಳು ಮತ್ತು ಕಥೆಗಳು ಹಾಗೂ ಅನೇಕ ಶಾಸನಗಳು ಮತ್ತು ದಾಖಲೆಗಳು' ಮುಂತಾದ ಲೇಖನಗಳಲ್ಲಿ ಉಲ್ಲೇಖಗೊಂಡಿರುವ ಐತಿಹಾಸಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು "ಹೊನ್ನಾಳಿ ಹಿರೇಕಲ್ಮಠದ ಐತಿಹಾಸಿಕ ನೆಲೆ"ಯನ್ನು ಸಂಶೋಧನಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

---

ಭಾರತವು ಹಿಂದಿನಿಂದಲೂ ಆಧ್ಯಾತ್ಮಿಕ ತತ್ವ ಚಿಂತನೆಗಳ ಹಾಗೂ ಅನೇಕ ಐತಿಹಾಸಿಕ ನೆಲೆಗಳ ನೆಲೆವೀಡು. ಮಾನವ ಕುಲದ ಉದ್ಧಾರಕ್ಕಾಗಿ ಅನೇಕ ಮಠ–ಮಂದಿರಗಳು ಇಲ್ಲಿ ಸ್ಥಾಪಿಸಲ್ಪಟ್ಟಿವೆ. ಆಯಾ ಕಾಲಘಟ್ಟಗಳಿಗೆ ಅನುಸಾರವಾಗಿ ಮಠ–ಮಂದಿರಗಳು ಅಲ್ಪ ಸ್ವಲ್ಪ ಬದಲಾವಣೆಗೊಳ್ಳುತ್ತ ಇಂದು ತಮ್ಮದೇ ಆದ ನಾವಿನ್ಯತೆಯನ್ನು ಪಡೆದುಕೊಂಡಿವೆ. ಇವುಗಳಲ್ಲಿ ಅನೇಕ ಮಠ–ಪೀಠಗಳು ಐತಿಹಾಸಿಕವಾಗಿ ಅತ್ಯಂತ ಪ್ರಾಚೀನ ನೆಲೆಗಳಾಗಿವೆ. ಅಂತಹ ಐತಿಹಾಸಿಕ ನೆಲೆಗಳಲ್ಲಿ "ಹೊನ್ನಾಳಿ ಹಿರೇಕಲ್ಮಠ"ವು ಒಂದಾಗಿದೆ.

ಅತ್ಯಂತ ಪ್ರಾಚೀನವಾದ ಮಠಗಳಲ್ಲಿ ಒಂದೆನಿಸಿಕೊಂಡಿರುವ 'ಹೊನ್ನಾಳಿ ಹಿರೇಕಲ್ಮಠದ ಐತಿಹಾಸಿಕ ನೆಲೆ'ಯನ್ನು ಸಂಶೋಧನಾತ್ಮಕವಾದ ಅಧ್ಯಯನದ ಹಿನ್ನೆಲೆಯಲ್ಲಿ ಕಟ್ಟಿಕೊಡುವುದು ಇಲ್ಲಿನ ವಿಷಯ ವಿಶ್ಲೇಷಣೆಯ ಮುಖ್ಯ ಉದ್ದೇಶವಾಗಿದೆ. ಈ ಕುರಿತಂತೆ ಈಗಾಗಲೇ ಹಲವು ಕೃತಿಗಳು ಬಿಡಿ ಲೇಖನಗಳು ಪ್ರಕಟಗೊಂಡಿವೆಯಾದರು ಅವುಗಳು ಹಿರೇಕಲ್ಮಠದ ಮೂಲ ಐತಿಹಾಸಿಕ ನೆಲೆಯನ್ನು ಗುರುತಿಸುವಲ್ಲಿ ಸಂಶೋಧನಾತ್ಮಕವಾಗಿ ಪೂರ್ಣಪ್ರಮಾಣದಲ್ಲಿ ಕಟ್ಟಿಕೊಟ್ಟಿರುವಂತೆ ಕಾಣುವುದಿಲ್ಲ. ಅದಾಗ್ಯೂ ಹೊನ್ನಾಳಿ 'ಹೊನ್ನಾಳಿ ಹಿರೇಕಲ್ಮಠದ ಗುರುಪರಂಪರೆ', ಡಾ. ನಾ. ಕೊಟ್ರೇಶ್ ಉತ್ತಂಗಿಯವರ 'ಹೊನ್ನೆಲೆಗಳು' ಕೃತಿಗಳಲ್ಲಿ, ಇತಿಹಾಸ ಪ್ರಾಧ್ಯಾಪಕರಾದ ಪ್ರೊ. ಎಂ. ಶಿವಶಂಕರಯ್ಯ ಅವರು 'ಪಂಚಾಮೃತ' (2006ರ ಸ್ಮರಣ ಸಂಪುಟ) ಕೃತಿಯಲ್ಲಿ ಬರೆದ "ಹೊನ್ನಾಳಿ ಶ್ರೀ ಚನ್ನಪ್ಪಸ್ವಾಮಿ ಮಠದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಅಧ್ಯಯನ" ಎಂಬ ಲೇಖನದಲ್ಲಿ ಹಾಗೂ 'ಜಾನಪದದ ವಿವಿಧ ಪ್ರಕಾರದ ಹಾಡುಗಳು ಮತ್ತು ಕಥೆಗಳು ಹಾಗೂ ಅನೇಕ ಶಾಸನಗಳು ಮತ್ತು ದಾಖಲೆಗಳು' ಮುಂತಾದ ಲೇಖನಗಳಲ್ಲಿ ಹೊನ್ನಾಳಿ ಹಿರೇಕಲ್ಮಠದ ಐತಿಹಾಸಿಕ ಹಿನ್ನೆಲೆಯನ್ನು ಗುರುತಿಸಬಹುದಾಗಿದೆ.

ಹೊನ್ನಾಳಿಯು ಅತ್ಯಂತ ಪ್ರಾಚೀನವಾದ ಧಾರ್ಮಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಕ್ಷೇತ್ರ. ಇಲ್ಲಿ ಹಿರೇಕಲ್ಮಠ, ಪ್ರಾಚೀನವಾದ ಈಶ್ವರನ ದೇವಸ್ಥಾನ, ರಾಘವೇಂದ್ರಸ್ವಾಮಿಮಠ, ಅಲ್ಲದೆ ಅನೇಕ ದೇವಾಲಯಗಳು,

ಮಸೀದಿಗಳು, ಚರ್ಚು ಮುಂತಾದವುಗಳು ಇಲ್ಲಿವೆ. ಅಲ್ಲದೆ ಐತಿಹಾಸಿಕ ಹಿನ್ನಲೆಯುಳ್ಳ ನವಾಬರ ವಂಶಸ್ಥರು ಇಲ್ಲಿ ನೆಲೆಸಿದ್ದಾರೆ. ಹೊನ್ನಾಳಿಯ ಮೂಲ ಹೆಸರು 'ಬಿದರೆಹಳ್ಳಿ' ಈ ಹಳ್ಳಿಗೆ ಹೊನ್ನಾಳಿ ಎಂಬ ಹೆಸರು ಬರಲು ಕಾರಣವನ್ನು ವಿದ್ವಾಂಸರು ಹಲವು ರೀತಿಯಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆದರಲ್ಲಿ ಮುಖ್ಯವಾಗಿ ಹೊನ್ನಾಳಿ ಹಿರೇಕಲ್ಮಠದ ಮಠದ ಸ್ಥಾಪಕರು ಹಾಗೂ ಶ್ರೀಶೈಲಪೀಠದ ಜಗದ್ಗುರುಗಳಾಗಿದ್ದ ಜಗದ್ಗುರು ಜಡೆಶಂಕರ ಶಿವಾಚಾರ್ಯರು ಬಿದರೆಹಳ್ಳಿಯ ಭಕ್ತರ ಕೋರಿಕೆಯ ಮೇರೆಗೆ ಒಣಗಿದ ಅರಳಿ ಮರವನ್ನು ಚಿಗುರಿಸಿ ಹೊನ್ನಿನ ಮಳೆ ಸುರಿಯುವಂತೆ ಮಾಡಿದ್ದರಿಂದ ಹೊನ್ನಾಳಿ ಎಂಬ ಹೆಸರು ಬಂದಿತು ಎಂಬ ಐತಿಹ್ಯವಿದೆ.

ಈ ಮಠವನ್ನು ಶ್ರೀ ಜಗದ್ಗುರು ಜಡೆಶಂಕರ ಶಿವಾಚಾರ್ಯರು 11ನೇ ಶತಮಾನದಲ್ಲಿ ಸ್ಥಾಪಿಸಿದ್ದಾರೆ ಎಂಬುದು ಇಲ್ಲಿನ ಜನರ ನಂಬಿಕೆ ಮತ್ತು ಅನೇಕ ವಿದ್ವಾಂಸರ ಅಭಿಪ್ರಾಯವೂ ಕೂಡ ಆಗಿದೆ. ಆದರೆ ನಿರ್ದಿಷ್ಟವಾಗಿ ಇಂತಹ ಸ್ಥಾಪಿಸಿದರೆಂಬುವುದನ್ನು ಇದುವರೆಗೂ ವಿದ್ವಾಂಸರಿಂದ ಗುರುತಿಸಲಾಗಿಲ್ಲ. ಅಲ್ಲದೇ ಇಲ್ಲಿನ ವಾಸ್ತುಶಿಲ್ಪ ಶೈಲಿ ವಿಜಯನಗರದ ಅರಸರ ವಾಸ್ತುಶಿಲ್ಪ ಶೈಲಿಯಂತಿದ್ದು, ಮೂಲ ಗುರುಗಳ ಕರ್ತೃ ಗದ್ದುಗೆಯ ಮುಂಭಾಗದಲ್ಲಿನ ದೀಪಸ್ತಂಭದಲ್ಲಿ ಕೆತ್ತಲಾಗಿರುವ ಕೆಳದಿ ಅರಸರ ಗಂಡಭೇರುಂಡವಿರುವ ರಾಜ್ಯ ಲಾಂಛನದ ಕೆತ್ತನೆ ಹಿರೇಕಲ್ಮಠದ ಇತಿಹಾಸ 16ನೇ ಶತಮಾನದ್ದೆಂದು ಸಾರುತ್ತದೆ. ಈಗಿರುವ ಹಿರೇಕಲ್ಮಠದ ವಾಸ್ತುಶಿಲ್ಪ ಶೈಲಿಯನ್ನು ನೋಡಿದರೆ ಯಾವುದೇ ವಿದ್ವಾಂಸರಾದರು ಇದೇ ಅಭಿಪ್ರಾಯ ಪಡುವರು. ಅಲ್ಲದೆ ಮಳಲಕೆರೆ ಗುರುಮೂರ್ತಿಯವರು ತಮ್ಮ "ಶ್ರೀಶೈಲ ಮಹಾ–ಕ್ಷೇತ್ರ ಮತ್ತು ಶ್ರೀಶೈಲ ಪಂಡಿತಾರಾಧ್ಯ ಪೀಠ ದರ್ಶನ" ಎಂಬ ಕೃತಿಯಲ್ಲಿ 18ನೇ ಶತಮಾನದಲ್ಲಿ ಆಗಿ ಹೋಗಿರಬಹುದಾದ ಶ್ರೀಶೈಲ ಪೀಠದ 27ನೇ ಜಗದ್ಗುರುಗಳಾದ ಶ್ರೀ ಜಡೆಶಂಕರ ಶಿವಾಚಾರ್ಯರು ಈ ಮಠದ ಸ್ಥಾಪಕರು ಎಂದು ಹೇಳಿರುವುದರಿಂದ ಹೊನ್ನಾಳಿ ಹಿರೇಕಲ್ಮಠದ ಐತಿಹಾಸಿಕತೆಯ ಕುರಿತಂತೆ ಸಹೃದಯದಲ್ಲಿ ಅನೇಕ ರೀತಿಯ ಪ್ರಶ್ನೆಗಳು ಮೂಡುತ್ತವೆ. ಈ ರೀತಿಯ ಅಭಿಪ್ರಾಯಗಳಿಂದ ಅನೇಕ ಗೊಂದಲಗಳು ಉಂಟಾಗುವ ಸಾಧ್ಯತೆಗಳಿವೆ. ಈ ಎಲ್ಲಾ ಗೊಂದಲಗಳು ಅಥವಾ ಪ್ರಶ್ನೆಗಳಿಗೆ ಪರಿಹಾರವನ್ನು ಈ ಕೆಳಗಿನಂತೆ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ

ಪ್ರಸ್ತುತ ಈ ಮಠಕ್ಕೆ ಈಗಾಗಲೇ 17 ಜನ ಮಠಾಧೀಶರು ಆಗಿ ಅಭಿವೃದ್ಧಿ ಕಾರ್ಯಗಳನ್ನು, ಸಮಾಜ ಸೇವೆಗಳನ್ನು ಕೈಗೊಂಡು ಲಿಂಗೈಕ್ಯರಾಗಿದ್ದು, ಪ್ರಸ್ತುತ 18ನೇ ಮಠಾಧಿಪತಿಗಳಾಗಿ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠದ ಅಭಿವೃದ್ಧಿ ಹಾಗೂ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಏಳನೇ ಮಠಾಧಿಪತಿಗಳಾಗಿ ನೇಮಕಗೊಂಡ ಒಡೆಯರ್ ಶ್ರೀ ಚನ್ನರಾಜದೇಶಿಕೇಂದ್ರ 'ಚನ್ನಬಸವ ಶಿವಾಚಾರ್ಯರು' (1675 ರಿಂದ 1750) ಇವರನ್ನು ಗೌರವದಿಂದ ಕಾಣುತ್ತಿದ್ದ ಕೆಳದಿ ಅರಸರು ಶಿವಮೊಗ್ಗ ಜಿಲ್ಲೆ ಆಯನೂರು ಕುಡಿ ಗ್ರಾಮ (ಬೇಚರಾಕ್ ಗ್ರಾಮ)ಕ್ಕೆ 'ಬಸವರಾಜಪುರ' ಎಂಬ ಹೆಸರನ್ನಿಟ್ಟಿರುವುದು ಮೈಸೂರು ಅರ್ಕ ಲಾಜಿಕಲ್ ವರದಿ 1923 ಸಂಖ್ಯೆ 63 ರಿಂದ ತಿಳಿದುಬರುತ್ತದೆ. ಅಲ್ಲದೆ ಕೆಳದಿಯ ಬಸವಪ್ಪನಾಯಕ (1697–1714)ರ ಕಾಲದ ನಿರೂಪದಲ್ಲಿ ಶ್ರೀಶೈಲ ಪರ್ವತ ಸಿಂಹಾಸನ ಪಟ್ಟದ ಬಸವರಾಜ ಒಡೆಯರು ಎಂದಿರುವುದು ಜೊತೆಗೆ ಪಲ್ಲಕ್ಕಿ ಭೂಷಿತರಾಗಿ, ಬಿರುದಾವಳಿಗಳ ಸಮೇತ, ಪಂಚವಾದ್ಯ, ಪಂಚ ಕಳಸಾದಿಗಳ ಸಹಿತ ಮೆರವಣಿಗೆ ಹೋಗಬಹುದು, ಯಾರಾದರೂ ಇದಕ್ಕೆ ಅಡ್ಡಿಪಡಿಸಿದಲ್ಲಿ ಅಂತಹವರಿಗೆ ಅರಮನೆಯ ಕಡೆಯಿಂದ ಶಿಕ್ಷೆ ವಿಧಿಸಲಾಗುವುದೆಂಬ ಅಂಶಗಳನ್ನು ಉಲ್ಲೇಖಿಸಲಾಗಿದೆ. ಇದರಿಂದ ಮಳಲಕೆರೆ ಗುರುಮೂರ್ತಿಯವರು ಹೇಳಿದ ಶ್ರೀಶೈಲ 27ನೇ ಪೀಠಾಧಿಪತಿಗಳಾದ ಜಗದ್ಗುರು ಜಡೆಶಂಕರ ಶಿವಾಚಾರ್ಯರಗಿಂತಲೂ ಪೂರ್ವದಲ್ಲಿ ಈ ಮಠವು ಸ್ಥಾಪನೆಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಪ್ರಸ್ತುತ ಮಠದ ವಾಸ್ತುಶಿಲ್ಪ ಶೈಲಿ ಮತ್ತು ಕಾಲದ ವಿಚಾರವಾಗಿ ನೋಡುವುದಾದರೆ ವಿದ್ವಾಂಸರ ಅಭಿಪ್ರಾಯ ಸರಿಯಾಗಿಯೇ ಇದೆ. ಈಗಿರುವ ಹಿರೇಕಲ್ಮಠವು ಕೆಳದಿಯ ಅರಸರ ಕಾಲದಲ್ಲಿಯೇ ನಿರ್ಮಾಣಗೊಂಡಿದ್ದು, ಈ ಮಠದ ಅಂದಿನ ಆರನೇ ಮಠಾಧಿಪತಿಗಳಾಗಿ ಒಡೆಯರ್ ಚನ್ನರಾಜ ದೇಶಿಕೇಂದ್ರ ಚನ್ನಗುರು ಮಲ್ಲಯ್ಯ ಅಥವಾ ಚನ್ನ ಗುರುಮಲ್ಲಾರ್ಯರು, ಇವರ ಕಾಲಮಾನ ನಿರ್ದಿಷ್ಟವಾಗಿ ಗೊತ್ತಿಲ್ಲದಿದ್ದರೂ ಸಿಗುವ ಆಧಾರಗಳಿಂದ 16ನೇ ಶತಮಾನವೆಂದಷ್ಟೆ ಹೇಳಬಹುದಾಗಿದೆ. ಇವರ ಕಾಲದಲ್ಲಿಯೇ ಈಗಿನ ಹಿರೇಕಲ್ಮಠವನ್ನು ಕೆಳದಿ ಅರಸರ ಕಾಲದಲ್ಲಿ ಕಟ್ಟಿಸಲಾಗಿದೆ. ಅಲ್ಲದೇ ಇವರ ಕಾಲ ಅನೇಕ ಐತಿಹಾಸಿಕ ಘಟನೆಗಳಿಗೆ ಕಾರಣವಾಗಿದೆ. ಹಿರೇಕಲ್ಮಠದ ಕಟ್ಟಡದ ಆರಂಭ, ನವಾಭರಿಗೆ ಅಭಯಹಸ್ತ ಮತ್ತು ಮಠದೊಂದಿಗೆ ನವಾಬರ ಸ್ನೇಹ ಸಂಬಂಧ ಬೆಳೆಯುವಂತಾಯಿತು. ನವಾಬರು ಶರಣಾಗತರಾಗಲು ಒಂದು ಕಡೆ ಗುರುಗಳ ದೈವಿಕಶಕ್ತಿಯಾದರೆ,

ಮತ್ತೊಂದು ಕಡೆ ಅದೇವೇಳೆ ಕೇಳದಿಯ ಚೆನ್ನಮ್ಮಾಜಿ ನವಾಬರನ್ನು ಸೋಲಿಸಿ ಶರಣಾಗುವಂತೆ ಮಾಡಿರುವ ಸಾಧ್ಯತೆಯು ಇದೆ. ಇದೇ ವೇಳೆ ಮಠವನ್ನು ಬೃಹತ್ ಶಿಲೆಗಳಿಂದ ಹಿರೇಕಲ್ಮಠವನ್ನು ಕಟ್ಟಿಸಿರುವಂತೆ ಕಾಣುತ್ತದೆ. ಇನ್ನು ಮೈಸೂರಿನಲ್ಲಿ ಮಾರ ನಾಯಕನಿಂದ ರಾಣಿಗೆ ಉಂಟಾಗಿದ್ದ ಕಂಟಕವನ್ನು ನಿವಾರಿಸಿ, ಯದುವೀರರಿಗೆ 'ಒಡೆಯರ್' ಎಂಬ ಅಭಿದಾನ ನೀಡುವರು ಆಗ ಮೈಸೂರಿನ ರಾಣಿ ಹಾಗೂ ಅಳಿಯನದ ರಾಜ ಯದುವೀರರು ನಾವಲ್ಲ ನೀವೇ ನಮ್ಮೆಲ್ಲರಿಗೂ 'ಒಡೆಯರು' ಎಂದು ಹೇಳುವ ಮೂಲಕ 'ಒಡೆಯರ್' ಎಂಬ ಶಬ್ದ ಮುಂದಿನ ಮಠದ ಪರಂಪರೆಯ ಎಲ್ಲಾ ಗುರುಗಳು ಹೆಸರಿನ ಮುಂದೆ 'ಒಡೆಯರ್' ಎಂಬ ಅಭಿದಾನ ಬರಲು ಕಾರಣವಾಯಿತು. ಜೊತೆಗೆ ಹಿಂದೆ ಶಾಸನದಲ್ಲಿ ದಾಖಲಾಗಿರುವಂತೆ "ಗುರುವಿನ ಹತ್ತಿವೂರು" ಎಂದಿದ್ದ ಊರು ಮುಂದೆ ಕೆಳದಿಯ ಕರಣಿಕನ ಕುತಂತ್ರದಿಂದ 'ಒಡೆಯರ ಹತ್ತೂರು' ಎಂದಾಗಲೂ ಇವರಿಗೆ ಇದ್ದ ಒಡೆಯರ್ ಎಂಬ ಅಭಿದಾನವೇ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಾರಣವಾಗಿರುವಂತೆ ತೋರುತ್ತದೆ.

ಇನ್ನೂ ಪ್ರಮುಖವಾಗಿ ಹಿರೇಕಲ್ಮಠವನ್ನು ಚನ್ನಪ್ಪಸ್ವಾಮಿ ಮಠವೆಂದೇ ಪ್ರಖ್ಯಾತಿಗೊಳಿಸಿರುವವರು ಎರಡನೇ ಮಠಾಧಿಪತಿಗಳಾದ ಶ್ರೀ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು. ಇವರಿಗೆ ಸಂಬಂಧಿಸಿದಂತೆ ಎರಡು ಶಾಸನಗಳಲ್ಲಿ ಇವರ ಉಲ್ಲೇಖ ಇರುವುದನ್ನು ಗುರುತಿಸಬಹುದು. ಬಳ್ಳೇಶ್ವರದ ಶಾಸನ (ಎಪಿಗ್ರಾಫಿಯ ಕರ್ನಾಟಿಕ ಗಿ೫೫ ಹೊನ್ನಾಳಿ–17) ಇದರ ಕಾಲಮಾನ ಕ್ರಿ.ಶ 1180 ರಿಂದ 1190, ಇದಕ್ಕೂ ಪೂರ್ವದ ಕ್ರಿ.ಶ 1121 ನೇ ಕಾಲಮಾನದ ದೇವಿಶೆಟ್ಟಿಗೆ ಸಂಬಂಧಿಸಿದ (ದಾವಣಗೆರೆ–3ನೇ ಶಾಸನ)ಶಾಸನ, ಈ ಎರಡು ದಾನ ಶಾಸನಗಳಲ್ಲಿ ಮಲ್ಲಿಕಾರ್ಜುನ ಗುರುಗಳ ಪಾದ ತೊಳೆದು ದಾನ ನೀಡಿದ ಉಲ್ಲೇಖವಿರುವುದುನ್ನು ನಾವು ಕಾಣಬಹುದಾಗಿದೆ. ಅಲ್ಲದೆ ಜಾನಪದ ಲಾವಣಿಯೊಂದರಲ್ಲಿ ಇವರ ಪಟ್ಟಾಧಿಕಾರ ಶ್ರೀ ಶಕೆ 901 ರ ಪ್ರಭು ಕಾರ್ತಿಕದಲ್ಲಿ ಇವರ ಪಟ್ಟಾಧಿಕಾರ ಆದ ಬಗ್ಗೆ ಉಲ್ಲೇಖವಿದೆ. ಅಂದರೆ ಕ್ರಿ.ಶ 979 ರಲ್ಲಿ ಇವರ ಪಟ್ಟಾಧಿಕಾರ ಆಗಿರುವಂತೆ ತೋರುತ್ತದೆ. ಆದ್ದರಿಂದ ಇದಕ್ಕಿಂತ 12ರಿಂದ 14 ವರ್ಷ ಮುಂಚೆ ಇವರ ಜನನವಾಗಿ ಇರಬಹುದೆಂದು ಊಳಿಸಬಹುದಾಗಿದೆ. ಇವರು ಒಟ್ಟು 300 ವರ್ಷಗಳ ಕಾಲ ಬದುಕಿದ್ದರೆಂದು ತಿಳಿದು ಬರುತ್ತದೆ. ಆ ಕುರಿತು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಯಬೇಕಿದೆ. ಈ ಮಠವನ್ನು ಸ್ಥಾಪಿಸಿದವರು ಶ್ರೀಶೈಲ ಪೀಠದ ಶ್ರೀ ಜಗದ್ಗುರು ಜಡೆಶಂಕರರು ಶಂಕರದಾಸಿಮಯ್ಯ ಗುರುಗಳಾಗಿದ್ದರು. ಇವರ ಕಾಲಮಾನ 10ನೇ ಶತಮಾನದ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇವರು ಜೀವಂತ ಸಮಾಧಿಯನ್ನು ಹೊಂದಿರುವರು. ಇವರಿಗೆ ಸಂಬಂಧಿಸಿದಂತೆ ಇವರು ಶಂಕರದಾಸಿಮಯ್ಯನ ಗುರು ಹಾಗೂ ಆರಾಧ್ಯ ದೈವ ಆಗಿದ್ದರು ಎಂಬುವುದಕ್ಕೆ ಅನೇಕ ಶಾಸನ ಆಧಾರಗಳು, ಅನೇಕ ಕೃತಿಗಳಲ್ಲಿ ಉಲ್ಲೇಖಗೊಂಡಿದೆ. ಅಲ್ಲದೆ ಶಂಕರದಾಸಿಮಯ್ಯ ಪುರಾಣ ಒಂದು ಅಧ್ಯಯನ ಎಂಬ ಡಾ.ಅನ್ನಪೂರ್ಣ ಎಂ. ಜಾಲವಾದಿಯವರ ಸಂಶೋಧನಾತ್ಮಕ ಮಹಾಪ್ರಬಂಧದಿಂದ ತಿಳಿದುಬರುತ್ತದೆ. ಆದರೆ ಈ ಮಠವನ್ನು ಅವರೇ ಸ್ಥಾಪಿಸಿದ್ದಾರೆ ಎಂಬ ಉಲ್ಲೇಖ ಆ ಸಂಶೋಧನ ಮಹಾಪ್ರಬಂಧದಲ್ಲಿ ಕಂಡುಬರುವುದಿಲ್ಲ. ಅಂದರೆ ಸ್ಥಳೀಯವಾಗಿ ಗುರುಪರಂಪರೆ, ಜಾನಪದ ಕಥೆಗಳು, ಜೋಗುಳ ಪದ, ಲಾವಣಿ ಮುಂತಾದ ಜನಪದ ಪ್ರಕಾರಗಳು, ಕೆಲವು ಕೃತಿಗಳು, ಕೆಲವು ಬಿಡಿ ಲೇಖನಗಳು ಇವರೇ ಮೂಲ ಮಠದ ಸ್ಥಾಪಕರು ಎಂಬುವುದನ್ನು ನಿರೂಪಿಸುತ್ತವೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹೊನ್ನಾಳಿ ಹಿರೇಕಲ್ಮಠ ಅತ್ಯಂತ ಪ್ರಾಚೀನವಾದ ಮಠ ಎಂಬುದು ಗೊತ್ತಾಗುತ್ತದೆ. ಶ್ರೀ ಜಗದ್ಗುರು ಜಡೆಶಂಕರರಿಂದ ಕ್ರಿ.ಶ. 10ನೇ ಶತಮಾನದ ಉತ್ತರ ಭಾಗದಿಂದ 11ನೇ ಶತಮಾನದ ಪೂರ್ವಭಾಗದ ಕಾಲಘಟ್ಟದಲ್ಲಿ ಈ ಮಠವು ಸ್ಥಾಪನೆಯಾಗಿರುವಂತೆ ಕಂಡುಬರುತ್ತದೆ. ಇವರ ಶಿಷ್ಯ ಪರಂಪರೆಯಲ್ಲಿ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ಹಾಗೂ ಚನ್ನಮಲ್ಲಾರ್ಯರು ಈ ಇಬ್ಬರ ಕಾಲಘಟ್ಟದಲ್ಲಿ ಕಲ್ಲಿನ ಮಠವು ಸ್ಥಾಪನೆಯಾದಂತೆ ಕಂಡು ಬರುತ್ತದೆ. ಚನ್ನಮಲ್ಲಿಕಾರ್ಜುನರು ಕಲ್ಲಿನ ಮಠವನ್ನು ಮೊದಲು ಕಟ್ಟಿಸುವರು. ಆದರೆ ಅದು ಚಿಕ್ಕದಾಗಿದ್ದರಿಂದಲೋ ಅಥವಾ ಶಿಥಿಲಗೊಂಡಿದ್ದರಿಂದಲೋ ಅಥವಾ ದಾಳಿಕಾರರ ಆಕ್ರಮಣದಿಂದ ನಾಶವಾಗಿರಬಹುದಾದ ಸಾಧ್ಯತೆಯಿದ್ದು, ಚನ್ನಮಲ್ಲಾರ್ಯರ ಕಾಲದಲ್ಲಿ ಬೃಹತ್ ಕಲ್ಲುಗಳಿಂದ ಮಠ ಮರುನಿರ್ಮಾಣ ಗೊಂಡಂತೆ ತೋರುತ್ತದೆ. ಚನ್ನಮಲ್ಲಿಕಾರ್ಜುನರು ಅಹಿಂಸೆಯನ್ನು ಬೋಧಿಸಿ, ಸರ್ವರನ್ನೂ ಸಮಾನವಾಗಿ ಕಂಡು, ಲಿಂಗದೀಕ್ಷೆಯನ್ನು ನೀಡಿದರು. ಅವರ ಪರಂಪರೆಯನ್ನು ಮುಂದುವರಿಸುವುದರ ಜೊತೆಗೆ ಅವರ ಗುರುಪರಂಪರೆಯ ಆರನೇ ಗುರುಗಳಾದ ಚನ್ನಮಲ್ಲಾರ್ಯರು 'ಕಾರ್ಲ್ ಮಾರ್ಕ್ಸ್'ನಿಗಿಂತ ಹಲವು ವರ್ಷಗಳ ಪೂರ್ವದಲ್ಲೇ "ಶ್ರಮಕ್ಕೆ ತಕ್ಕ ಪ್ರತಿಫಲ" ಎಂಬ ಮಾತಿನಂತೆ 'ಚನ್ನಪ್ಪಸ್ವಾಮಿ ಕೂಲಿ' ಎಂಬ ನಾಣ್ನುಡಿಗೆ ಕಾರಣೀಭೂತರಾಗಿದ್ದಾರೆ.

ಒಟ್ಟಾರೆಯಾಗಿ ಐತಿಹಾಸಿಕವಾಗಿ ಅತ್ಯಂತ ಪ್ರಾಚೀನವಾದ ಈ ಹಿರೇಕಲ್ಮಠವು ಸಮಾಜಕ್ಕೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಲವಾರು ರೀತಿಯ ಕೊಡುಗೆಗಳನ್ನು ನೀಡುತ್ತಾ ಬಂದಿರುವುದನ್ನು ಗುರುತಿಸಬಹುದು.

**ಆಕರಗಳು/ಪರಾಮರ್ಶನ ಗ್ರಂಥಗಳು**


1) ಲಿಂ. ಶ್ರೀ. ಬಿ. ಶಾಂತವೀರಯ್ಯ ಅಗರಬನ್ನಿಹಟ್ಟಿ ಮತ್ತು ಶ್ರಿ ಅ. ಸಿ. ಹಿರೇಮಠ, ಹೊನ್ನಾಳಿ ಹಿರೇಕಲ್ಮಠದ ಗುರು ಪರಂಪರೆ, ಚೆನ್ನ-ಚೇತನ ಪ್ರಕಾಶನ, ಬೃಹಶ್ಚೀಲಾಮಠ, ಹೊನ್ನಾಳಿ–577217, 05–03–2012 (ಎಂಟನೇ ಆವೃತ್ತಿ)

2) ಡಾ. ನಾ. ಕೊಟ್ರೇಶ್ ಉತ್ತಂಗಿ, ಹೊನ್ನೆಲೆಗಳು, ಸಹನಾದ್ರಿ ಪ್ರಕಾಶನ, ಅಗ್ನಿಶಾಮಕಠಾಣೆ ಹತ್ತಿರ, ಹೊನ್ನಾಳಿ–577217, ದಾವಣಗೆರೆ ಜಿಲ್ಲೆ, 2004

3) ಪ್ರ.ಸಂ. ಪ್ರೊ. ಎಚ್. ಎ ಭಿಕ್ಷಾವರ್ತಿಮಠ, ಪಂಚಾಮೃತ, 2006 ರ ಸ್ಮರಣ ಸಂಪುಟ, ಪ್ರಕಾಶಕರು ಅಧ್ಯಕ್ಷರು ಶ್ರೀ ಪಂಚಾಚಾರ್ಯ ಯುಗಮಾನೋತ್ಸವ ಸಮಿತಿ ಹಿರೇಕಲ್ಮಠ, ಹೊನ್ನಾಳಿ – 577217, 02–04–2006

4) ಸಂ. ಶ್ರೀ ಕತ್ತಿಗೆ ಪರಮೇಶ್ವರಪ್ಪ, ಜಾನಪದರಲ್ಲಿ ಶ್ರೀ ಚನ್ನಪ್ಪಸ್ವಾಮಿಯ ಹಾಡುಗಳು, ಚನ್ನಚೇತನ ಪ್ರಕಾಶನ, ಬೃಹಶ್ಚಿಲಾಮಠ, ಹೊನ್ನಾಳಿ, 2010

5) ಡಾ. ಅನ್ನಪೂರ್ಣ ಎಂ. ಜಾಲವಾದಿ, ಶಂಕರದಾಸಿಮಯ್ಯ ಪುರಾಣ ಒಂದು ಅಧ್ಯಯನ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ, 2016

6) ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, 49 1/ಸಿ, ಅಕ್ಕಮಹಾದೇವಿ ರಸ್ತೆ, ಪಿ. ಜೆ ಬಡಾವಣೆ, ದಾವಣಗೆರೆ–1